ಸತ್ಸಹವಾಸವು ನಾವು ಸಹಜವಾಗಿ ಮತ್ತು ಸಕ್ರಮವಾಗಿ ಬದುಕಲು ಮತ್ತು ನಿತ್ಯದ ಸಮಸ್ಯೆಗಳನ್ನು ಯುಕ್ತಾಯುಕ್ತವಾಗಿ ಬಗೆಹರಿಸಿಕೊಳ್ಳಲು ಅಗತ್ಯ ತರಬೇತಿ ನೀಡುತ್ತದೆ. ಸತ್ಸಂಗದಿಂದ ಸಣ್ಣತನ, ಪೂರ್ವಾಗ್ರಹ ಮತ್ತು ಪಕ್ಷಪಾತ ದೃಷ್ಟಿಗಳೆಲ್ಲ ನಮ್ಮಿಂದ ದೂರವಾಗುತ್ತವೆ. ಸತ್ಸಂಗಕ್ಕೆ ನಾವು ಅಂಟಿಕೊಳ್ಳದಿದ್ದರೆ ಉತ್ಥಾನಕ್ಕೆ ನಾವು ಪಡುವ ಪ್ರಾಮಾಣಿಕ ಹಂಬಲವು ವ್ಯರ್ಥವಾಗುತ್ತದೆ. ಒಳಿತು ಕೆಡುಕುಗಳ ವ್ಯತ್ಯಾಸವೇ ನಮಗೆ ತಿಳಿಯುವುದಿಲ್ಲ. ವಾಸ್ತವವಾಗಿ ಹೇಳುವುದಾದರೆ, ನಮ್ಮ ವಕ್ರ ಐಹಿಕ ಪ್ರಲೋಭನೆಗಳನ್ನು ಪರಿವರ್ತಿಸಿ ನಮ್ಮನ್ನು ಸಜ್ಜನಿಕೆ, ಸಭ್ಯತೆ ಮತ್ತು ಸಹಜತೆಗಳ ಕಡೆ ತಿರುಗಿಸುವ ಶಿಕ್ಷಣ ದೊರೆಯುವುದು ಸತ್ಸಂಗದಿಂದ ಮಾತ್ರ. ಒಳ್ಳೆಯ ಸಹವಾಸದಿಂದ ವ್ಯಕ್ತಿಯು ಸ್ಥಾನಮಾನಗಳು ಉನ್ನತಗೊಳ್ಳುತ್ತವೆ. ಬಹುಮಟ್ಟಿಗೆ ವ್ಯಕ್ತಿತ್ವಕ್ಕೆ ನಮ್ಮ ಸಹವಾಸವೇ ಅಳತೆಗೋಲಾಗುತ್ತದೆ.

ಸತ್ಸಹವಾಸದಿಂದ ಸತ್ಪರಿಣಾಮ. ಆದರಿಂದ ವ್ಯಕ್ತಿಯ ಅಂತರಂಗ ಬಹಿರಂಗಗಳೆರಡಕ್ಕೂ ಸಂಸ್ಕಾರ ದೊರೆಯುತ್ತದೆ. ಅವನು ಒಳಹೊರಗೆ ಪರಿಶುದ್ಧನಾಗುತ್ತಾನೆ. ಪರಿಸರಕ್ಕೆ ಬೇಕಾದ ಬದುಕು ಅವನದಾಗುತ್ತದೆ. 'ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ' ಎಂದು ಸರ್ವಜ್ಞ ಹೇಳಿರುವುದು ಅದಕ್ಕೇ.

ಜಿಲ್ಲಾ ವಾರ್ತೆ

ಹಾಸನ ಜಿಲ್ಲೆ

ದಿನಾಂಕ : 18-09-2007 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಹಾಸನ ತಾಲ್ಲೂಕು ಸ್ಥಳೀಯ ಸಂಸ್ಥೆ ವತಿಯಿಂದ ಸೈಕಲ್ ಹೈಕ್ ಕಾರ್ಯಕ್ರಮವನ್ನು ಹಾಸನ ನಗರ ಶಾಲೆಗಳ ಸ್ಕೌಟ್ಸ್ - ಗೈಡ್ಸ್ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಹಾಸನ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಹೆಚ್.ಕೆ. ಪುಷ್ಪಲತರವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ಹಸಿರು ನಿಶಾನೆ ತೋರಿಸಿ ಶುಭ ಹಾರೈಸಿದರು.

ಜಿಲ್ಲಾ ಸ್ಕೌಟ್ ಕಮೀಷನರ್ ಡಾ|| ವೈ.ಎಸ್. ವೀರಭದ್ರಪ್ಪರವರು ಭಾಗವಹಿಸಿದ ಎಲ್ಲಾ ಸ್ಕೌಟ್ಸ್ - ಗೈಡ್ಸ್‌ಗಳಿಗೆ ಸಿಹಿಯನ್ನು ವಿತರಣೆ ಮಾಡಿ ಶುಭ ಹಾರೈಸಿದರು. ಸಮಾರಂಭದಲ್ಲಿ ಹಾಸನ ಜಿಲ್ಲಾ ಸ್ಕೌಟ್ಸ್ ಸಂಘಟನಾಧಿಕಾರಿಯಾದ ಶ್ರೀ ಎಲ್.ಟಿ. ಲೋಕೇಶ್‌ರವರು ಸ್ಕೌಟ್ಸ್ - ಗೈಡ್ಸ್‌ಗಳಿಗೆ ಸೈಕಲ್ ಹೈಕ್‌ನ ಬಗ್ಗೆ ಪೂರ್ಣವಾದ ವಿವರವನ್ನು ನೀಡಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಎಂ.ಎಸ್. ಪ್ರಕಾಶ್‌ರವರು ಹೈಕ್ ಕಾರ್ಯಕ್ರಮದ ಮಾರ್ಗಸೂಚಿಗಳನ್ನು ಹಾಗೂ ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸುವಂತೆ ಸೂಚಿಸಿದರು.

ಈ ಕಾರ್ಯಕ್ರಮವನ್ನು ಹಾಸನ ತಾಲ್ಲೂಕಿನ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಎನ್.ಆರ್. ಚಂದ್ರಾಚಾರ್‌ರವರು ಮತ್ತು ಖಜಾಂಚಿಗಳಾದ ಶ್ರೀ ಡಿ.ಎನ್. ಪ್ರಕಾಶ್‌ರವರು ಆಯೋಜಿಸಿ ಯಶಸ್ವಿಗೊಳಿಸಿದರು.

ಕಾರ್ಯಕ್ರಮದಲ್ಲಿ ಹಾಸನ ತಾಲ್ಲೂಕ್ ಸಹಾಯಕ ಜಿಲ್ಲಾ ಆಯುಕ್ತರಾದ ಶ್ರೀ ಸದಾಶಿವಶೆಟ್ಟಿರವರು ಗೈಡ್ಸ್ ಶಿಕ್ಷಕಿಯವರಾದ ಶ್ರೀಮತಿ ತಾರಾರವರು, ಕಾರ್ಯನಿರ್ವಹಿಸಿದರು. ಈ ಕಾರ್ಯಕ್ರಮದಲ್ಲಿ ನಗರ ಶಾಲೆಗಳ 102 ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಹಾಸನ ಜಿಲ್ಲಾ ಸ್ಕೌಟ್ಸ್ ಭವನದಿಂದ ಹೊರಟು ಶ್ರೀರಾಮದೇವರಹಳ್ಳಿಯವರೆಗೆ ಸೈಕಲ್ ಹೈಕ್ ಮಾಡಿದರು.

ದಕ್ಷಿಣ ಕನ್ನಡ ಜಿಲ್ಲೆ

ದಿನಾಂಕ : 29-07-2007 ರಂದು ಸ್ಕೌಟಿಂಗ್ ಶತಮಾನೋತ್ಸವ ಆಚರಣೆಯ ಶಾಂತಿ ಯಾತ್ರೆಯು ರಾತ್ರಿ 10.30ಕ್ಕೆ ಸ್ಕೌಟ್-ಗೈಡ್ ಭವನ ಮಂಗಳೂರು ಇಲ್ಲಿಗೆ ಆಗಮಿಸಿತ್ತು. ಈ ಯಾತ್ರೆಯ ಪ್ರತಿನಿಧಿಗಳನ್ನು ಗೌರವ ಪೂರ್ವಕ ಸ್ವಾಗತಿಸಿ ಪಿಲಿಕುಳ ತರಬೇತಿ ಕೇಂದ್ರದಲ್ಲಿ ಉಳಿದುಕೊಳ್ಳುವ ವ್ಯವಸ್ಥೆಯನ್ನು ಮಾಡಲಾಯಿತು. ಸುಳ್ಯದಲ್ಲಿ ಭೋಜನ ವ್ಯವಸ್ಥೆಯನ್ನು ಮಾಡಿ ಕೊಡಗು ಜಿಲ್ಲೆಗೆ ಬೀಳ್ಕೊಡಲಾಯಿತು.

ಪಾಣೆಮಂಗಳೂರು ಸ್ಥಳೀಯ ಸಂಸ್ಥೆಯು ಸಟಿಪನಡು ಶಾಲೆಯ ಸ್ಕೌಟು ಗೈಡುಗಳಿಂದ ವನಮಹೋತ್ಸವ ಆಚರಿಸಲಾಯಿತು.

ಉಳ್ಳಾಲ ಸ್ಥಳೀಯ ಸಂಸ್ಥೆಯ ಮಂಜುನಾಡಿ ಶಾಲೆಯಲ್ಲಿ ಹೊಸದಾಗಿ ಗೈಡ್ ದಳ ಉದ್ಘಾಟಿಸಲ್ಪಟ್ಟಿತು.

ದಿನಾಂಕ : 09-08-2007 ಮೂಡುಬಿದ್ರೆ ಸ್ಥಳೀಯ ಸಂಸ್ಥೆಯ ಸಹಯೋಗದಲ್ಲಿ ಆಳ್ವಾರ್ ಇವರ ಸಹಯೋಗದೊಂದಿಗೆ ಮುಕ್ತಾನಂದಪರಮಹಂಸ ಶಾಲೆ ಬೆಳುವಾಯಿ ಇಲ್ಲಿ ವನಮಹೋತ್ಸವ ಆಚರಿಸಲಾಯಿತು.

ದಿನಾಂಕ : 15-08-2007 ರಂದು ಸ್ವಾತಂತ್ರ್ಯೋತ್ಸವದ ಅಂಗವಾಗಿ ನೆಹರು ಮೈದಾನದಲ್ಲಿ ನಡೆದ ಪಥಚಲನ ಕಾರ್ಯಕ್ರಮದಲ್ಲಿ ಸಂತ ಅಲೋಸಿಯಸ್ ಪ್ರೌಢಶಾಲೆಯ ಸ್ಕೌಟ್‌ಗಳು ಹಾಗೂ

ಸಂತ ಆ್ಯನ್ ಪ್ರೌಢ ಶಾಲೆಯ ಗೈಡ್‌ಗಳು ಭಾಗವಹಿಸಿದ್ದರು. ಪಥಚಲನದಲ್ಲಿ ಸಂತ ಆ್ಯನ್ ಶಾಲೆ ದ್ವಿತೀಯ ಸ್ಥಾನ ಪಡೆದಿದೆ.

ದಿನಾಂಕ : 19-08-2007 ರಂದು ರವಿವಾರ ಜಿಲ್ಲಾಧಿಕಾರಿಗಳ ನಿವಾಸದಲ್ಲಿ ತೃತೀಯ ಸೋಪಾನ - ತೃತೀಯ ಚರಣ ಹಾಗೂ ಸುವರ್ಣ ಪಂಕ್ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಅಧ್ಯಕ್ಷ ಸ್ಥಾನವನ್ನು ಜಿಲ್ಲಾಧಿಕಾರಿಗಳಾದ ಶ್ರೀ ಮಹೇಶ್ವರ ರಾವ್ ವಹಿಸಿದ್ದರು. ವೇದಿಕೆಯಲ್ಲಿ ಅವರ ಸಹ ಧರ್ಮಿಣಿ ಶ್ರೀಮತಿ ಮಹೇಶ್ವರ ರಾವ್, ಶ್ರೀ ಐ.ಎ. ಕೈರನ್ನ, ಸಹೋದರಿ ಲಿಡಿಯಾ ಫರ್ನಾಂಡಿಸ್, ಉಪಾಧ್ಯಕ್ಷರಾದ ಶ್ರೀ ಕುಡ್ವಿ ಜಗದೀಶ್ ಶೆಟ್ಟಿ, ಶ್ರೀ ಕೆ.ಆರ್. ಶೆಟ್ಟಿ, ಶ್ರೀಮತಿ ಐರಿನ್ ಡಿ ಕುನ್ಹ, ಎನ್.ಜಿ. ಮೋಹನ್, ಶ್ರೀ ರಾಮಶೇಷ ಶೆಟ್ಟಿ ಮೊದಲಾದ ಗಣ್ಯರು ಉಪಸ್ಥಿತರಿದ್ದು ಈ ಸಂದರ್ಭದಲ್ಲಿ ಹಿರಿಯ ಸ್ಕೌಟರ್ ಶ್ರೀ ಜಿ.ಕೆ. ಭಟ್ ಹಾಗೂ ಅವರ ಶಿಷ್ಯರಾದ ಚಿಮಾಯಾಂಕ್ ಹಾಗೂ ಸಚಿನ್ ಇವರಿಗೆ ವಿಶ್ವ ಸ್ಕೌಟ್ ಜಾಂಬೋರಿಯಲ್ಲಿ ಭಾಗವಹಿಸಿದ್ದಕ್ಕೆ ಗೌರವಿಸಲಾಯಿತು.

ಸ್ಕೌಟ್ಸ್ ಗೈಡ್ಸ್ ಘಟಕದ ಉದ್ಘಾಟನೆ : ನಗರದ ಬೋಳೂರಿನ ಅಮೃತ ವಿದ್ಯಾಲಯ ಶಿಕ್ಷಣ ಸಂಸ್ಥೆಯಲ್ಲಿ ಸ್ಕೌಟ್ಸ್, ಗೈಡ್ಸ್ ಕಬ್ಸ್ ಬುಲ್‌ಬುಲ್ ಘಟಕಗಳ ವಿಧ್ಯುಕ್ತ ಉದ್ಘಾಟನೆಯು ಶಾಲಾ ಸಂಚಾಲಕಿ ಬ್ರಹ್ಮಚಾರಿಣಿ ಮಂಗಳಾಮೃತ ಚೈತನ್ಯರವರಿಂದ ನೆರವೇರಿಸಲ್ಪಟ್ಟಿತು. ಅತಿಥಿಗಳಾಗಿ ಭಾಗವಹಿಸಿದ ಮಂಗಳೂರು ನಗರ ವಲಯದ ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯದರ್ಶಿಗಳಾದ ಶ್ರೀ ಪ್ರತಿಮ್ ಕುಮಾರ್‌ರವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶಾಲೆಯ ಪ್ರಾಂಶುಪಾಲೆ ಶ್ರೀಮತಿ ಇಂದಿರಾ ವರ್ಮರವರು ಉಪಸ್ಥಿತರಿದ್ದರು. ಕಬ್ ಮಾಸ್ಟರ್ ಶ್ರೀ ಹರೀಶ್ ಜೋಗಿ ಸ್ವಾಗತಿಸಿದರು. ಸ್ಕೌಟ್ ಮಾಸ್ಟರ್ ಶ್ರೀ ಕಿರಣ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು. ಬುಲ್‌ಬುಲ್ ಶಿಕ್ಷಕಿ ಕುಮಾರಿ ಸುಮಂಗಳ ವಂದಿಸಿದರು.

ಮೈಸೂರು ಜಿಲ್ಲೆ

Centenary Scouting logo for Bharat Scouts and Guides North Local Association was released by Deputy Commissioner of Mysore Shri S. Selva Kumar on the occasion of Scouting Centenary Rally held on July 31st 2007 in Mysore. The logo is designed by H.G. Sameera, Secretary, North Local Association.

ಕೊಪ್ಪಳ ಜಿಲ್ಲೆ

ವಿಶ್ವ ಸ್ಕೌಟ್ - ಗೈಡ್ ಶತಮಾನೋತ್ಸವವನ್ನು ಕುಷ್ಟಗಿಯಲ್ಲಿ ದಿನಾಂಕ 18-08-2007 ರಂದು ದಿ ಕ್ರೆಸ್ಟ್ ಕಿಂಗ್ ಶಾಲೆಯಲ್ಲಿ ಆಚರಿಸಲಾಯಿತು. ಈ ಸಮಾರಂಭಕ್ಕೆ ಉದ್ಘಾಟಕರಾಗಿ ಶ್ರೀ ಫಕೀರಪ್ಪ ಚಳಗೇರಿ, ಜಿಲ್ಲಾ ಪಂಚಾಯತ್ ಸದಸ್ಯರು, ಹನಮಸಾಗರ ಆಗಮಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಪ್ರೇಮಾ ಹರೀಶ್, ಅಧ್ಯಕ್ಷರು, ತಾಲ್ಲೂಕು ಪಂಚಾಯುತ್ ಕುಷ್ಟಗಿ, ನ್ಯಾಯವಾದಿಗಳಾದ ಶ್ರೀ ಅಮರೇಗೌಡ ಪಾಟೀಲ, ಜಿಲ್ಲಾ ಡಿ.ಓ.ಸಿ.ಯಾದ ಶ್ರೀ ಯರ್ರಣ್ಣ, ಸ್ಥಳೀಯ ಸಂಸ್ಥೆ ಅಧ್ಯಕ್ಷರಾದ ಶ್ರೀ ಶೇಖರಗೌಡ ಮಾಲಿಪಾಟೀಲ, ಕಾರ್ಯದರ್ಶಿ ಶ್ರೀ ದೊಡ್ಡನಗೌಡ ಗೌಡರ, ಕ್ರೈಸ್ ದಿ ಕಿಂಗ್ ಶಾಲೆಯ ಸ್ಕೌಟ್ ಮಾಸ್ಟರಾದ, ಶ್ರೀ ಗಿರೀಶ್ ಹಾಗೂ ಗೈಡ್ ಕ್ಯಾಪ್ಟನ್ ಉಪಸ್ಥಿತರಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಫಾದರ್ ಫ್ರಾನ್ಸಿಸ್ ವಹಿಸಿಕೊಂಡಿದ್ದರು.

ದಾವಣಗೆರೆ ಜಿಲ್ಲೆ

ಯರಲಕಟ್ಟೆಯಲ್ಲಿ ವಿಶ್ವ ಸ್ಕೌಟ್ ಶತಮಾನೋತ್ಸವ ಆಚರಣೆ : ದಾವಣಗೆರೆ ಜಿಲ್ಲೆಯ ಯರಲಕಟ್ಟೆಯಲ್ಲಿ ದಿನಾಂಕ : 31-08-2007 ರಂದು ಬೆಳಗ್ಗೆ 10. ಗಂಟೆಗೆ ಸ್ಕೌಟ್ಸ್ ಗೈಡ್ಸ್ ಮಕ್ಕಳಿಂದ ಧ್ವಜಾರೋಹಣ ಕಾರ್ಯಕ್ರಮದೊಂದಿಗೆ ವಿಶ್ವ ಸ್ಕೌಟ್ ಶತಮಾನೋತ್ಸವ ಪ್ರಾರಂಭವಾಗಿ ಘೋಷಣೆಗಳೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಪಥಸಂಚಲನ ಮಾಡಲಾಯಿತು. ನಂತರ ಶ್ರೀಯುತ ಹೆಚ್. ಮೃತ್ಯಂಜಯ, ಬಡ್ತಿ ಮು.ಶಿ. ಇವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಮಂಜುಳ (ಎ.ಎಸ್.ಒ.ಸಿ.) ದಾವಣಗೆರೆ ಇವರು ಮಾಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ಜಿ. ಕರಿಯಪ್ಪ (ಎಸ್.ಡಿ.ಎಂ.ಸಿ. ಅಧ್ಯಕ್ಷರು) ಮತ್ತು ಸದಸ್ಯರು, ಊರಿನ ಹಿರಿಯರು ಹಾಗೂ ಮಕ್ಕಳು ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀಮತಿ ಮಂಜುಳಾ, ಎ.ಎಸ್.ಓ.ಸಿ., ಇವರು ಜಿಲ್ಲಾ ಸಂಸ್ಥೆ ದಾವಣಗೆರೆ ವತಿಯಿಂದ ಶಾಲೆಗೆ 6 ಜೊತೆ ಗೈಡ್ ಸಮವಸ್ತ್ರ ವಿತರಿಸಿದರು.

ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ಜಯ್ಯಪ್ಪ ಇವರಿಂದ ಶಿಬಿರಾಗ್ನಿ ಉದ್ಘಾಟನೆ ನೆರವೇರಿಸಲಾಯಿತು.

ಗೈಡ್ ಶಿಕ್ಷಕಿಯಾದ ಶ್ರೀಮತಿ ಜೆ.ಎಂ. ವಜ್ರಗಂಗಮ್ಮ, ಯರಲಕಟ್ಟೆ ಇವರು ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಸತ್ಪ್ರಜೆಯಾಗಿ ಬೆಳೆಯಲು ಈ ಚಳುವಳಿ ಸಹಾಯಕ ಎಂದು ತಿಳಿಸಿದರು.

ದಾವಣಗೆರೆ ನಗರವಾಣಿ ಪತ್ರಿಕೆಯ ಮುಖ ಪುಟದ ಸುದ್ದಿ

ಮಕ್ಕಳಲ್ಲಿ ಶಿಸ್ತು, ಸಹೋದರತ್ವ ಬೆಳೆಸುವಲ್ಲಿ ಸ್ಕೌಟ್ಸ್-ಗೈಡ್ಸ್ ಯಶಸ್ವಿ : ಎಸ್. ಶಿವಶಂಕರಪ್ಪ :

ದಾವಣಗೆರೆ, ಆ. 11 - ಮಕ್ಕಳಲ್ಲಿ ನಾಯಕತ್ವ, ರಾಷ್ಟ್ರ ನಿರ್ಮಾಣದ ಗುಣಗಳನ್ನು ಬೆಳೆಸಿ ಉತ್ತಮ ನಾಗರೀಕರನ್ನಾಗಿ ರೂಪಿಸಿ, ಸರ್ವಾಂಗೀಣ ಅಭಿವೃದ್ಧಿಯ ಪಥದತ್ತ ಕೊಂಡೊಯ್ಯುತ್ತಿರುವ ಸ್ಕೌಟ್ಸ್ ಮತ್ತು ಗೈಡ್ಸ್ ಕಾರ್ಯ ನಿಜಕ್ಕೂ ಶ್ಲಾಘನೀಯವೆಂದು ಶಾಸಕ ಶಾಮನೂರು ಶಿವಶಂಕರಪ್ಪನವರು ತಿಳಿಸಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ವತಿಯಿಂದ ವಿಶ್ವ ಸ್ಕೌಟ್ಸ್ ಮತ್ತು ಗೈಡ್ಸ್ ಶತಮಾನೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಸರ್ವಧರ್ಮ ಪ್ರಾರ್ಥನೆ ಮತ್ತು ಪ್ರತಿಜ್ಞೆ ಪುನರಾವರ್ತನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಮೊದಲ ಬಾರಿಗೆ ಕೊಂಡಜ್ಜಿ ಬಸಪ್ಪನವರ ಪರಿಶ್ರಮದಿಂದ ಉತ್ತಮ ಬೆಳವಣಿಗೆ ಸಾಧಿಸಿದ ಸಂಸ್ಥೆ ಅವರ ಕಾಲಾವಧಿ ನಂತರ ದಾವಣಗೆರೆಯಲ್ಲಿ ಚಿಗಟೇರಿ ಜಯಣ್ಣ ಇನ್ನಿತರರು ಉತ್ತಮ ಸೇವೆ ಸಲ್ಲಿಸಿ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಬೇಕಾದಂತಹ ಮಾನವೀಯ ಮೌಲ್ಯಗಳನ್ನು ನೀಡುವ ಈ ಚಳುವಳಿ ಉತ್ತಮ ಯಶಸ್ಸಿ ಪಡೆದಿದೆ ಎಂದರು.

ಜಿಲ್ಲೆಯ ಅನೇಕ ಬಡ ಮಕ್ಕಳು ಈ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿದ್ದು, ಅಂತಹ ಮಕ್ಕಳಿಗೆ ಸಮವಸ್ತ್ರ ನೀಡುವ ಉದ್ದೇಶದಿಂದ ಪ್ರತಿ ವರ್ಷ ಒಂದು ಲಕ್ಷ ರೂಪಾಯಿಗಳನ್ನು ನೀಡುವ ಭರವಸೆ ನೀಡಿದ ಅವರು ಕೊಂಡಜ್ಜಿಯಲ್ಲಿರುವ ಸಂಸ್ಥೆಯ ಅಭಿವೃದ್ಧಿಗೆ ಮುಂದಿನ ದಿನಗಳಲ್ಲಿನ ರೂಪುರೇಷೆ ತಯಾರಿಸಿ ಸರ್ಕಾರದಿಂದ ಅಗತ್ಯ ನೆರವು ಕೊಡಿಸುವುದಾಗಿ ತಿಳಿಸಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಪ್ರಧಾನ ಆಯುಕ್ತ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪನವರು ಮಾತನಾಡಿ, ವಿದ್ಯಾರ್ಥಿ ಸಮುದಾಯದಲ್ಲಿ ಶಿಸ್ತು - ಸಂಯಮ ಮೈಗೂಡಿಸುವಲ್ಲಿ ಸಂಸ್ಥೆ ಯಶಸ್ವಿಯಾಗಿದ್ದು, ಉತ್ತಮ ಚಿಂತನೆ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು

ಮೂಡಿಸಲಿದೆ. ವಿದ್ಯಾರ್ಥಿ ದೆಸೆಯಲ್ಲಿಯೇ ಜಾಗೃತಿ ಮೂಡಿಸುವ ಕೆಲಸ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಮಾಡುತ್ತಿದೆ ಎಂದರು.

ಜಿಲ್ಲಾ ಸಂಸ್ಥೆಯ ಅಧ್ಯಕ್ಷ ಶ್ರೀ ಅಥಣಿ ಕೊಟ್ರೇಶ್ ಅಧ್ಯಕ್ಷತೆ ವಹಿಸಿದ್ದ ಈ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಶ್ರೀ ಎ.ಆರ್. ಶಂಕರಪ್ಪ ಮೇಷ್ಟ್ರು, ಜಿಲ್ಲಾ ಮುಖ್ಯ ಆಯುಕ್ತ ಶ್ರೀ ಜಂಬಗಿ ಶರಣಪ್ಪ, ಶ್ರೀ ಮೊಹಮ್ಮದ್ ವಾಸಿಲ್, ಶ್ರೀಮತಿ ಶಾಂತಾ ಯಾವಗಲ್, ಶ್ರೀಮತಿ ಸಿ. ಮಂಜುಳಾ, ಡಾ|| ಪಂಚಣ್ಣ, ಶ್ರೀ ಎ. ನಾಗರಾಜ್ ಉಪಸ್ಥಿತರಿದ್ದರು.

ಸ್ಕೌಟ್ಸ್ ಜಿಲ್ಲಾ ಆಯುಕ್ತ ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ ಸ್ವಾಗತ ಮಾಡಿದರು.

ಬಾಗಲಕೋಟೆ ಜಿಲ್ಲೆ

ಜಮಖಂಡಿ ತಾಲ್ಲೂಕು ಮುಧೋಳ ಸರಕಾರಿ ಪ್ರೌಢಶಾಲೆ ಪ್ರಾರಂಭೋತ್ಸವ, ಪ್ರಾಥಮಿಕ ಶಾಲೆ ಹೆಚ್ಚುವರಿ ಕೊಠಡಿ ಉದ್ಘಾಟನೆ, ವಿಶ್ವ ಸ್ಕೌಟ್ಸ್ ಶತಮಾನೋತ್ಸವ ಮತ್ತು 14 ಸ್ಕೌಟ್ಸ್‌ಗಳಿಗೆ ರಾಜ್ಯ ಪುರಸ್ಕಾರ ಸ್ಕೌಟ್ಸ್ ಪ್ರಶಸ್ತಿ ವಿತರಣೆಯನ್ನು ಮಾನ್ಯಶ್ರೀ ಬಸವರಾಜ ಹೊರಟ್ಟಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ನೆರವೇರಿಸಿದರು. ಅಧ್ಯಕ್ಷತೆಯನ್ನು ಮಾನ್ಯಶ್ರೀ ಗೋವಿಂದ ಕಾರಜೋಳ, ಆಹಾರ, ನಾಗರಿಕ ಪೂರೈಕೆ ಸಚಿವರು ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರು ವಹಿಸಿದ್ದರು. ಅತಿಥಿಗಳಾಗಿ ಮಾನ್ಯಶ್ರೀ ಪಿ.ಸಿ. ಗದ್ದಿಗೌಡರ, ಸಂಸದರು, ಬಾಗಲಕೋಟೆ, ಜಿಲ್ಲಾಧಿಕಾರಿಗಳಾದ ಶ್ರೀ ಜಿ.ಎನ್. ನಾಯಕ್, ಜಿ.ಪ.ಸಿ.ಇ.ಓ. ಶ್ರೀ ರಾಮಣ್ಣ ನಾಯಕ ತಾಲ್ಲೂಕು ಪಂಚಾಯತಿ ಅಧ್ಯಕ್ಷರಾದ ಶ್ರೀ ರಂಗಪ್ಪ ಒಂಟಗೋಡಿ ಡಿ.ಡಿ.ಪಿ.ಐ., ಶ್ರೀ ಎಂ.ಪಿ. ದೇಶಪಾಂಡೆ, ಡಯಟ್ ಪ್ರಾಚಾರ್ಯರು. ಶ್ರೀ. ಎಸ್.ಎಂ. ಬೆಟಗೇರಿ ಇ.ಇ.ಓ.ಎಸ್.ಪಿ. ಬಾಡಗಂಟಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶ್ರೀ ವೈ.ವಿ. ಮಾಚಾ ಸ್ಥಾನಿಕ ಆಯುಕ್ತರು, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ ಬಾಲಗಕೋಟೆ ಅವರು ಸಂಘಟಿಸಿದ್ದರು.

ರಾಯಚೂರು ಜಿಲ್ಲೆ

ದಿನಾಂಕ : 29-08-2007 ರಂದು ನ್ಯಾಷನಲ್ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಕಬ್ಸ್ ಮತ್ತು ಬುಲ್‌ಬುಲ್ಸ್ ಘಟಕಗಳ ಉದ್ಘಾಟನೆ ಮಾಡಲಾಯಿತು. ಉದ್ಘಾಟಕರಾಗಿ ಶ್ರೀ ಕೆ. ತಿಮ್ಮಯ್ಯ, ಜಿಲ್ಲಾ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಯಚೂರು ಇವರು ಆಗಮಿಸಿದ್ದರು. ಶ್ರೀಮತಿ ಅಜೀಜಾ ಸುಲ್ತಾನ, ಜಿಲ್ಲಾ ಆಯುಕ್ತರು (ಗೈಡ್ಸ್) ಇವರು ಉಪಸ್ಥಿತರಿದ್ದರು. ಸಭೆಯ ಅಧ್ಯಕ್ಷತೆ ಶ್ರೀ ವೈ. ಈರಣ್ಣ ಇವರು ವಹಿಸಿದ್ದರು. ಕಾರ್ಯಕ್ರಮವನ್ನು ಶ್ರೀ ಖಾಜಾ ಹುಸೇನ್, ಜಿಲ್ಲಾ ಸಂಘಟನ ಆಯುಕ್ತರು ಸ್ಕೌಟ್ಸ್ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಶ್ರೀ ಯೂಸೂಫ್ ಖಾನ್, ಜಿಲ್ಲಾ ಅಲ್ಪಸಂಖ್ಯಾತರ ಅಧ್ಯಕ್ಷರು ಭಾಗವಹಿಸಿ ಮಾತನಾಡಿದರು.

ಶಿವಮೊಗ್ಗ ಜಿಲ್ಲೆ

ವಿಶ್ವ ಸ್ಕೌಟ್ ಶತಮಾನೋತ್ಸವ ಆಚರಣೆ : ದಿನಾಂಕ 29-08-2007 ರಿಂದ 30-08-2007ರ ವರೆಗೆ ಜಿಲ್ಲಾ ಸ್ಕೌಟ್ಸ್ ಭವನದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸಂಸ್ಥೆ ಶಿವಮೊಗ್ಗ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಸ್ಕೌಟ್ಸ್ ಶತಮಾನೋತ್ಸವದ ಅಂಗವಾಗಿ ಜಿಲ್ಲಾ ಮಟ್ಟದ ಸ್ಕೌಟರ್ಸ್ ಮತ್ತು ಗೈಡರ್ಸ್‌ಗಳ ಸಮಾವೇಶವನ್ನು ಏರ್ಪಡಿಸಲಾಗಿತ್ತು.

ದಿನಾಂಕ : 29-08-2007 ರಂದು ಬೆಳಿಗ್ಗೆ 10.00 ಗಂಟೆಗೆ ಧ್ವಜಾರೋಹಣ ಮಾಡಲಾಯಿತು. 11.00

ಗಂಟೆಗೆ ಸಮಾವೇಶದ ಉದ್ಘಾಟನೆಯನ್ನು ಮೈತ್ರಾದೇವಿ ಮಹಾವಿದ್ಯಾಲಯದ ಸಹಕಾರ್ಯದರ್ಶಿ ಶ್ರೀಮತಿ ವೈ. ಅರುಣಾದೇವಿಯವರು ನೆರವೇರಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಆಯುಕ್ತ (ಸ್ಕೌಟ್ಸ್) ಆದ ಪ್ರೊ॥ ಎ.ಎಸ್. ಚಂದ್ರಶೇಖರ್‌ರವರು ವಹಿಸಿದ್ದರು. ಶ್ರೀ ಕೆ.ಪಿ. ಬಿಂದುಕುಮಾರ್, ಜಿಲ್ಲಾ ಕಾರ್ಯದರ್ಶಿ ಸರ್ವರನ್ನೂ ಸ್ವಾಗತಿಸಿದರು. ಶ್ರೀಮತಿ ಭಾರತಿ ಚಂದ್ರಶೇಖರ್, ಜಿಲ್ಲಾ ಆಯುಕ್ತರು (ಗೈಡ್ಸ್) ರವರ ವಂದನಾರ್ಪಣೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ದಿನಾಂಕ 29-08-2007ರ ಸಂಜೆ 7.00 ಗಂಟೆಗೆ ಜಿಲ್ಲಾ ಸ್ಕೌಟ್ಸ್ ಭವನದಿಂದ ಪಂಜಿನ ಮೆರವಣಿಗೆಯನ್ನು ಏರ್ಪಡಿಸಲಾಗಿತ್ತು. ಸನ್ಮಾನ್ಯ ಶ್ರೀ ಟಿ.ವಿ. ನಾರಾಯಣಶಾಸ್ತ್ರಿ, ಜಿಲ್ಲಾ ಮುಖ್ಯ ಆಯುಕ್ತರು ಪಂಜಿನ ಮೆರವಣಿಗೆಯನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸನ್ಮಾನ್ಯ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪನವರು, ರಾಜ್ಯ ಮುಖ್ಯ ಆಯುಕ್ತರು ಉಪಸ್ಥಿತರಿದ್ದರು. ರಾತ್ರಿ 8.00 ಗಂಟೆಗೆ ಜರುಗಿದ ಶಿಬಿರಾಗ್ನಿ ಕಾರ್ಯಕ್ರಮವನ್ನು ಶ್ರೀ ಎಸ್.ವಿ. ನರಸಿಂಹಮೂರ್ತಿ, ವೆಟರನ್ ಸ್ಕೌಟರ್ ಉದ್ಘಾಟಿಸಿದರು.

ದಿನಾಂಕ 30-08-2007 ರಂದು ಬೆಳಿಗ್ಗೆ ಎಲ್ಲಾ ಶಿಬಿರಾರ್ಥಿಗಳನ್ನು ಜಿಲ್ಲಾ ಸ್ಕೌಟ್ಸ್ ಭವನದಿಂದ ಗುಡ್ಡೇಕಲ್ ಶ್ರೀ ಸುಬ್ರಮಣ್ಯಸ್ವಾಮಿ ದೇವಸ್ಥಾನದ ಬೆಟ್ಟಕ್ಕೆ ಕರೆದುಕೊಂಡು ಹೋಗಲಾಗಿತ್ತು. ಅಲ್ಲಿ ಸೂರ್ಯೋದಯ ವೀಕ್ಷಿಸಿ, ದೇವಾಲಯದ ಮುಂಭಾಗದಲ್ಲಿ ಸರ್ವಧರ್ಮ ಪ್ರಾರ್ಥನೆ ಮಾಡಿ ಜಿಲ್ಲಾ ಸ್ಕೌಟ್ಸ್ ಭವನಕ್ಕೆ ಮರಳಿದ ನಂತರ ಧ್ವಜಾರೋಹಣ ಮಾಡಿ ಶಿಬಿರಾರ್ಥಿಗಳಿಗೆ ಪ್ರತಿಜ್ಞೆಯನ್ನು ಶ್ರೀ ಎಂ.ಜಿ. ಶಿವಕುಮಾರ್ ಎ.ಎಲ್.ಟಿ. (ಎಸ್) ಜಿಲ್ಲಾ ತರಬೇತಿ ಆಯುಕ್ತರು ಬೋಧಿಸಿದರು.

ಬೆಳಿಗ್ಗೆ 10.30ಕ್ಕೆ ವಿಶ್ವ ಸ್ಕೌಟ್ ಶತಮಾನೋತ್ಸವದ ಆಚರಣೆಯ ಉದ್ಘಾಟನೆಯನ್ನು ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪನವರು, ರಾಜ್ಯ ಮುಖ್ಯ ಆಯುಕ್ತರು, ನೆರವೇರಿಸಿ ಜಿಲ್ಲೆಯಲ್ಲಿ ಇನ್ನೂ ಸ್ಕೌಟಿಂಗ್ ಗೈಡಿಂಗ್ ಹೆಚ್ಚಾಗಬೇಕು ಎಂದು ಹೇಳಿ ರಾಜ್ಯದಲ್ಲಿನ ಹಿಂದಿನ ಮುಖ್ಯ ಆಯುಕ್ತರುಗಳ ಸೇವೆಯನ್ನು ಶ್ಲಾಘಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಟಿ.ವಿ. ನಾರಾಯಣ ಶಾಸ್ತ್ರಿಯವರು ತಮ್ಮ ಹಿಂದಿನ ಸ್ಕೌಟಿಂಗ್ ದಿನಗಳನ್ನು ನೆನೆಸಿಕೊಂಡರು. ಅವಶ್ಯವಿದ್ದ ಎಲ್ಲರಿಗೂ ಸ್ಕೌಟ್-ಗೈಡ್ ಸಮವಸ್ತ್ರವನ್ನು ಕೊಡುವುದಾಗಿ ವಾಗ್ದಾನ ಮಾಡಿದರು. ಇದೇ ಸಂದರ್ಭದಲ್ಲಿ ಪ್ರೊ॥ ಎ.ಎಸ್. ಚಂದ್ರಶೇಖರ್, ಜಿಲ್ಲಾ ಆಯುಕ್ತರು (ಸ್ಕೌಟ್ಸ್) ಮತ್ತು ಶ್ರೀಮತಿ ಭಾರತಿ ಚಂದ್ರಶೇಖರ್, ಜಿಲ್ಲಾ ಆಯುಕ್ತರು, (ಗೈಡ್ಸ್) ಅವರು ಅವರ ತಂದೆಗೆ 100 ವರ್ಷ ತುಂಬುವುದರಿಂದ 100 ಸಮವಸ್ತ್ರಗಳನ್ನು ಕೊಡುವುದಾಗಿ ಸಮಾರಂಭದಲ್ಲಿ ವಾಗ್ದಾನ ಮಾಡಿದರು.

ವಿಶ್ವ ಸ್ಕೌಟ್ ಶತಮಾನೋತ್ಸವದ ಅಂಗವಾಗಿ ದಿನಾಂಕ 1-8-2007 ರಂದು ಬೆಳಿಗ್ಗೆ 6 ಗಂಟೆಗೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸ್ಥಳೀಯ ಸಂಸ್ಥೆ ವತಿಯಿಂದ ಸ್ಥಳೀಯ ಕೋಳಿಕಾಲು ಬೆಟ್ಟದಲ್ಲಿ ಸೂರ್ಯೋದಯ ವೀಕ್ಷಣೆಯ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಗಿದೆ.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಜಿ.ಎನ್. ಪ್ರಕಾಶ್‌ರವರು ವಹಿಸಿದ್ದರು ಹಾಗೂ ಸ್ಥಳೀಯ ರೋಟರಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕೆ.ಪಿ.ಎಸ್. ಸ್ವಾಮಿ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸ್ಥಳೀಯವಾಗಿ ಸೂರ್ಯೋದಯ ವೀಕ್ಷಣೆಯ ನಂತರ ಮುರಾರ್ಜಿ ದೇಸಾಯಿ ಶಾಲಾವರಣದಲ್ಲಿ ಸಭಾಕಾರ್ಯಕ್ರಮದಲ್ಲಿ ಪ್ರತಿಜ್ಞಾ ವಿಧಿ ಸ್ವೀಕಾರ ನಡೆದು, ಸ್ಕೌಟ್

ಶತಮಾನೋತ್ಸವದ ಕಾರ್ಯಕ್ರಮ ಯಶಸ್ವಿಯಾಗಿ ಆಚರಿಸಲಾಯಿತು.

ವಿವಿಧ ಶಾಲೆಗಳಿಂದ ಸುಮಾರು 125 ಸ್ಕೌಟ್ಸ್ ಗೈಡ್ಸ್‌ಗಳು ಪೋಷಕರು, ಸ್ಕೌಟ್ಸ್ ಗೈಡ್ಸ್ ಶಿಕ್ಷಕ-ಶಿಕ್ಷಕಿಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಎ.ಎಸ್. ಮಂಜುನಾಥ್‌ರವರು ಎಲ್ಲರನ್ನೂ ಸ್ವಾಗತಿಸಿದರು. ಗೈಡ್ ಕ್ಯಾಪ್ಟನ್ ಶ್ರೀಮತಿ ಸಿಸಿಲಿಯಾ ಮಸ್ಕರೇನಸ್ ಎಲ್ಲರಿಗೂ ವಂದಿಸಿದರು.

ಉಡುಪಿ ಜಿಲ್ಲೆ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಾಪು ಸ್ಥಳೀಯ ಸಂಸ್ಥೆ ವತಿಯಿಂದ ಶತಮಾನೋತ್ಸವ ಜಾಥಾ ಮತ್ತು ಪೆಟ್ರೋಲ್ ಲೀಡರ್ಸ್ ತರಬೇತಿ ಶಿಬಿರ – ದಿನಾಂಕ 24-08-2007 ಮತ್ತು 25-08-2007ರ ವರೆಗೆ ದಂಡತೀರ್ಥ ಸಮೂಹ ವಿದ್ಯಾ ಸಂಸ್ಥೆಗಳು ಉಳಿಯಾರಗೊಳಿ ಕಾಪು ಇವರ ಆಶ್ರಯದಲ್ಲಿ ನಡೆದ ಸ್ಕೌಟಿಂಗ್ ಶತಮಾನೋತ್ಸವ ಜಾಥಾವನ್ನು ಶ್ರೀ ಲಾಲಾಜಿ ಆರ್. ಮೆಂಡನ್, ಶಾಸಕರು, ಕಾಪು ವಿಧಾನಸಭಾ ಕ್ಷೇತ್ರ ಇವರು ಬಂಗ್ಲೆ ಮೈದಾನ, ಕಾಪು ಇಲ್ಲಿ ಉದ್ಘಾಟಿಸಿದರು. ಸುಮಾರು 400 ಸ್ಕೌಟ್ಸ್, ಗೈಡ್ಸ್, ಕಬ್ಸ್, ಬುಲ್‌ಬುಲ್ಸ್ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಭಾಗವಹಿಸಿದ್ದರು.

ಪೆಟ್ರೋಲ್ ಲೀಡರ್ಸ್ ತರಬೇತಿ ಶಿಬಿರ ಉದ್ಘಾಟನೆಯನ್ನು ಶ್ರೀ ಎಂ. ಜಯರಾಮ ಹೆಗ್ಡೆ, ಆಡಳಿತ ಮೊಕ್ತೇಸರರು, ಶ್ರೀ ಜನಾರ್ಧನ ದೇವಸ್ಥಾನ, ಕಾಪು ಇವರು ಉದ್ಘಾಟಿಸಿದರು. ಡಾ॥ ಕೆ. ಪ್ರಭಾಕರ ಶೆಟ್ಟಿ, ಸಂಚಾಲಕರು, ದಂಡತೀರ್ಥ ಸಮೂಹ ವಿದ್ಯಾ ಸಂಸ್ಥೆಗಳು, ಕಾಪು ಹಾಗೂ ಅಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕಾಪು ಸ್ಥಳೀಯ ಸಂಸ್ಥೆ ಇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಆಲ್ಬನ್ ರೊಡ್ರಿಗಸ್, ಎ.ಡಿ.ಸಿ.(ಸ್ಕೌಟ್ಸ್) ಸ್ಕೌಟಿಂಗ್ ಶತಮಾನೋತ್ಸವದ ಬಗ್ಗೆ ಪ್ರಧಾನ ಭಾಷಣ ಮಾಡಿದರು. ಶ್ರೀ ಸುಬ್ರಮ್ಮಣ್ಯ ಶೆಟ್ಟಿ, ಆಡಳಿತ ಮೊಕ್ತೇಸರು, ಶ್ರೀ ಹೊಸಮಾರಿಗುಡಿ, ಕಾಪು ಲ॥ ಲೋಗೀಶ್ ವಿ. ಶೆಟ್ಟಿ, ಅಧ್ಯಕ್ಷರು ಲಯನ್ಸ್ ಕ್ಲಬ್, ಕಾಪು ಇವರುಗಳು ಮುಖ್ಯ ಅತಿಥಿಗಳಾಗಿ ಭಾವಹಿಸಿ ಮಾತನಾಡಿದರು.

ಹಾವೇರಿ ಜಿಲ್ಲೆ

ವಿಶ್ವ ಸ್ಕೌಟ್ಸ್ ಶಾಂತಿ ಜಾಥಾವು ದಿನಾಂಕ 30-07-2007ರಂದು ಹಾವೇರಿ ಜಿಲ್ಲೆಗೆ ಆಗಮಿಸಿದಾಗ ಅದರ ಬೀಳ್ಕೊಡಿಗೆಯನ್ನು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪ್ರಭಾಕರ ಮಂಗಳೂರವರು ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿದರು. 300 ಸ್ಕೌಟ್ಸ್ - ಗೈಡ್ಸ್ ಹಾಜರಿದ್ದರು. ಶ್ರೀ ಕಾಸಪ್ಪನವರ ಹಾಗೂ ಉಳಿದ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಸ್ಕೌಟ್ ಮಾಸ್ಟರ್ - ಗೈಡ್ ಕ್ಯಾಪ್ಟನ್ನರು ಹಾಜರಿದ್ದರು.

ಚಿಕ್ಕಮಗಳೂರು ಜಿಲ್ಲೆ

ದಿನಾಂಕ : 15-08-2007 ರಂದು ನಡೆದ ಸ್ವಾತಂತ್ರ್ಯ ದಿನಾಚರಣೆ ಪರೇಡ್‌ನಲ್ಲಿ ಜಿಲ್ಲೆಯ 8 ತಂಡಗಳು (5 ಸ್ಕೌಟ್ಸ್, 3 ಗೈಡ್ಸ್) ಪಾಲ್ಗೊಂಡಿದ್ದು ಸಂತ ಜೋಸೆಫ್ ಬಾಲಿಕಾ ಪ್ರೌಢ ಶಾಲೆಯ ಗೈಡ್ಸ್‌ಗಳು ಪ್ರಥಮ ಬಹುಮಾನ ಪಡೆಯುವುದರ ಜೊತೆಗೆ ರೋಲಿಂಗ್ ಶೀಲ್ಡ್ ಪಡೆದಿರುತ್ತಾರೆ.

ದಿನಾಂಕ 15-08-2007ರಂದು ನಗರದ ಶಾಲೆಗಳ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ಜಿಲ್ಲಾ ಆಟದ ಮೈದಾನವನ್ನು ಸ್ವಚ್ಛಗೊಳಿಸುವ ಕಾರ್ಯಕ್ರಮ ಹಮ್ಮಿಕೊಂಡು ಸಾರ್ವಜನಿಕ ಕ್ರೀಡಾಂಗಣವನ್ನು ಸ್ವಚ್ಛಗೊಳಿಸಿದರು.

ಗದಗ ಜಿಲ್ಲೆ

ಗದಗ ಜಿಲ್ಲಾ 2007-08ರ ರಾಜ್ಯ ಪುರಸ್ಕಾರ ಟೆಸ್ಟಿಂಗ್ ಕ್ಯಾಂಪ್ ಸಿ.ಡಿ.ಓ. ಜೈನ್ ಸ್ಕೂಲ್ ಗದಗದಲ್ಲಿ

ದಿನಾಂಕ 8-9-2007 ಹಾಗೂ 9-9-2007 ಎರಡು ದಿವಸ ನಡೆಯಿತು. 84 ಸ್ಕೌಟ್ಸ್ ಮಕ್ಕಳು 45 ಗೈಡ್ಸ್ ಮಕ್ಕಳು ಭಾಗವಹಿಸಿದ್ದರು. ಸ್ಕೌಟ್ಸ್‌ಗಳಿಗೆ ಶ್ರೀ ಜಿ.ಎ. ನರಗುಂದ, ಎಲ್.ಟಿ., ಪರೀಕ್ಷಕರಾಗಿ ಮತ್ತು ಗೈಡ್ಸ್‌ಗಳಿಗೆ ಶ್ರೀಮತಿ ಪ್ರಭಾ ಲೊಂಡೆಯವರು, ಎಲ್.ಟಿ., ಪರೀಕ್ಷಕರಾಗಿ, ಕಾರ್ಯನಿರ್ವಹಿಸಿದರು.

ಸರ್ಕಾರಿ ಹಿ.ಪ್ರಾ. ಶಾಲೆ ದೇವಿಹಾಳದಲ್ಲಿ ನಡೆದ ದೀಕ್ಷಾ ಕಾರ್ಯಕ್ರಮದಲ್ಲಿ ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀಯುತ ಹನುಮಂತಪ್ಪ ಯ ಕಾಶನ್ನರವರ ಹಾಗು ಉಪಾಧ್ಯಕ್ಷರಾದ ಪರಸಪ್ಪ, ಸ. ಲಮಾಣಿಯವರು ಹಾಜರಿದ್ದರು. ಶಾಲಾ ಸ್ಕೌಟ್ ಶಿಕ್ಷಕ ಶ್ರೀ ಎಂ.ವಿ. ನಾವ್ಹಿಯವರು ದೀಕ್ಷಾಕಾರ್ಯವನ್ನು ನೆರವೇರಿಸಿದರು. ಈ ಕಾರ್ಯದಲ್ಲಿ ಪ್ರದಾನ ಗುರುಗಳು, ಸಹ ಶಿಕ್ಷಕ - ಶಿಕ್ಷಕಿಯವರು ಊರಿನ ಗಣ್ಯ ಮಾನ್ಯ, ಶಿಕ್ಷರ ಪ್ರೇಮಿಗಳೂ ಹಾಜರಿದ್ದರು.

ವಿಶ್ವ ಸ್ಕೌಟ್ ಶತಮಾನೋತ್ಸವದ ವರದಿ : "ಶಿಕ್ಷಣದಲ್ಲಿ ನಡೆದಷ್ಟು ದಾರಿಯಿದೆ ಪಡೆದಷ್ಟು ಜ್ಞಾನವಿದೆ" ನಾವು ಕಲಿತದ್ದು ಸ್ವಲ್ಪ ಸಾಧಿಸಿದ್ದು ಸ್ವಲ್ಪ ಆದರೆ ನಾವು ಕಲಿತು ಸಾಧಿಸಬೇಕಾದ್ದು ಅಪಾರ ಎನ್ನುವ ತತ್ವಜ್ಞಾನಿಗಳ ಹೇಳಿಕೆಯಂತೆ ಸೂರ್ಯೋದಯ -ವಾಗುತ್ತಿದ್ದಂತೆ ಹಕ್ಕಿಗಳೆಲ್ಲಾ ತಮ್ಮ ಗೂಡು ಬಿಟ್ಟು ಹೊರಗೆ ಬರುವಂತೆ ನಮ್ಮ ಬುಲ್‌ಬುಲ್ ಮಕ್ಕಳೂ ಸಹ ತಮ್ಮ ಮನೆಯಿಂದ ಸರಿಯಾಗಿ ಬೆಳಿಗ್ಗೆ 7.00 ಗಂಟೆಗೆ ಮನೆಯಿಂದ ಪ್ಲಾಕ್ ಸಮವಸ್ತ್ರದೊಂದಿಗೆ ಹಾರುತ್ತಾ ಹೆಚ್.ಪಿ.ಕೆ.ಜಿ.ಎಸ್. ಶಾಲೆಗೆ ಬಂದು ಸೇರಿದ್ದರು.

ದಿನಾಂಕ 1-8-2007 ರಂದು ಬುಧವಾರದಂದು ಬೆಳಿಗ್ಗೆ 8-00 ಗಂಟೆಗೆ ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀ ಶರಣಪ್ಪ. ಈ ಚವಡಿರವರಿಂದ ಉದ್ಘಾಟನೆಗೊಂಡಿತು. ಈ ಸಮಾರಂಭದಲ್ಲಿ ಅಧ್ಯಕ್ಷರು, ಮುಖ್ಯಾಧ್ಯಾಪಕರು, ಸಹ ಶಿಕ್ಷಕರು ಉಪಸ್ಥಿತರಿದ್ದರು.

ಪ್ಲಾಕ್ ಪ್ರಾರ್ಥನಾಗೀತೆಯಾದ "ಹಮ್ ಹೈ ಛೋಟೆ....." ಎಂಬ ಗೀತೆಯನ್ನು ಹೇಳಿ, ಎಲ್ಲಾ ಬುಲ್‌ಬುಲ್ ಮಕ್ಕಳು ವೇದಿಕೆ ಮೇಲೆ ಉಪಸ್ಥಿತರಿದ್ದ ಗಣ್ಯ ಮಾನ್ಯರಿಗೆ ಘನವಂದನೆ ಸಲ್ಲಿಸಿದರು.

ಪ್ಲಾಕ್ ದಳದ ನಾಯಕಿಯರಾದ ಶ್ರೀಮತಿ ಜಿ.ಆರ್. ದೇವಾಂಗಮಠರವರು ಬುಲ್‌ಬುಲ್ ಪ್ರತಿಜ್ಞೆ ಹೇಳಿಸಿ ಪ್ರತಿಯೊಂದು ಬುಲ್‌ಬುಲ್‌ನಿಂದ ಪ್ಲಾಕ್ ನಿಯಮ ಹೇಳಿಸಿದರು. ಎಲ್ಲಾ ಮಕ್ಕಳು ಒಂದೊಂದು ಸುಭಾಷಿತ ಹೇಳಿದರು.

ಬುಲ್‌ಬುಲ್‌ಗಳು ಸದಾ ಸಿದ್ದ ಎಂಬ ಗಾದೆಯಂತೆ ಯಾವ ಯಾವ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು? ಎನ್ನುವುದನ್ನು ಸವಿಸ್ತಾರವಾಗಿ ಮಕ್ಕಳಿಗೆ ಶಾಲಾ ಮುಖ್ಯಾಧ್ಯಾಪಕರಾದ ಶ್ರೀ ಎಸ್.ಎಸ್. ಚಿಗರಿರವರು ತಿಳಿಸಿದರು.

ಮಕ್ಕಳು ದೈಹಿಕ ಬೌದ್ಧಿಕ ಸಾಮಾಜಿಕ ಅಧ್ಯಾತ್ಮಿಕವಾಗಿ ವಿಕಾಸಗೊಳ್ಳಲು ಈ ಪ್ಲಾಕ್ ವಿನೋದ ವಿಹಾರಗಳ ಮೂಲಕ ಸಾಧಿಸುತ್ತದೆ ಎಂದು ಶಾಲಾ ಸಹ ಶಿಕ್ಷಕರಾದ ಶ್ರೀ ಎಸ್.ಬಿ. ಕತ್ತಲ ಮತ್ತು ಶ್ರೀ ಎಲ್.ಸಿ. ಮಧುಸೂಧನರವರು ತಿಳಿಸಿದರು.

ಉದ್ಘಾಟಕರಾದ ಶ್ರೀ ಎಸ್.ಐ. ಚವಡಿರವರು ನಿಮ್ಮ ಸೇವೆ ಸ್ವಂತಕ್ಕೆ ಅಲ್ಲ, ಸಮಾಜಕ್ಕೂ ಸಹ ಎಂದು ವಿವರಿಸಿ ಹೇಳಿದರು.

ಮಕ್ಕಳು ತಾವು ಮಾಡಿದ ಪ್ರಗತಿ ಸಾಧನೆ ಬಗ್ಗೆ ತಮ್ಮ ತಮ್ಮ ಅನಿಸಿಕೆಗಳನ್ನು ವ್ಯಕ್ತ ಪಡಿಸಿ ಮುಂಬರುವ

ಮಕ್ಕಳಿಗೆ ಪ್ರಚೋದನೆಯಿತ್ತರು. ಆರೋಗ್ಯ ಸ್ವಚ್ಛತಾ ಕಾರ್ಯಕ್ರಮ ಸಸಿ ನೆಡುವುದು. ಪರಿಸರ ಸಂರಕ್ಷಣೆ, ಕುಡಿಯುವ ನೀರಿನ ರಕ್ಷಣೆ ಇತ್ಯಾದಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದನ್ನು ಹೇಳಿ ದಿನಕ್ಕೊಂದು ಒಳ್ಳೆಯ ಚಟುವಟಿಕೆಗಳ ಬಗ್ಗೆ ಹೇಳಿದರು. ಮತ್ತು ಶತಮಾನೋತ್ಸವದ ಘೋಷಣೆಗಳನ್ನು ಸಹಾ ಹೇಳಿದರು.

ನಂತರ ಶಾಂತ ರೀತಿಯಿಂದ ಕುಳಿತು ಸರ್ವಧರ್ಮ ಪ್ರಾರ್ಥನೆ ಮಾಡಿದರು.

ಸಮಾರಂಭದ ಅಧ್ಯಕ್ಷರಾದ ಶ್ರೀ ಎಚ್. ಕೋರಗಲ್‌ರವರು ಮಕ್ಕಳಿಗೆ ಹಿತವಚನಗಳನ್ನು ಹೇಳುತ್ತಾ ತಮ್ಮ ಅಧ್ಯಕ್ಷೀಯ ಭಾಷಣ ಮಾಡಿದರು.

ಪ್ಲಾಕ್ ದಳದ ನಾಯಕಿಯರು ಮಕ್ಕಳಿಗೆ ಬುಲ್‌ಬುಲ್ ನಾದದ ಚಟುವಟಿಕೆಯನ್ನು ಮಾಡಲು ತಿಳಿಸಿದರು. ನಂತರ ಈ ಶತಮಾನೋತ್ಸವದ ಸಮಾರಂಭಕ್ಕೆ ಬಂದಂಥ ಎಲ್ಲ ಗುರುವೃಂದದವರಿಗೂ ಎಸ್.ಡಿ.ಎಂ.ಸಿ. ಅಧ್ಯಕ್ಷರಿಗೂ ಧನ್ಯವಾದಗಳನ್ನು ತಿಳಿಸಿ ಈ ಶತಮಾನೋತ್ಸವದ ಪ್ರಾರಂಭೋತ್ಸವವನ್ನು ಮುಕ್ತಾಯಗೊಳಿಸಿದರು.

ಸ್ಕೌಟ್ ಶತಮಾನೋತ್ಸವ

ಸ್ಕೌಟ್ ಜನಕನಿಗೆ ಆಯಿತು
ಒಂದು ನೂರಾ ಐವತ್ತು ವರ್ಷ
ಸ್ಕೌಟ್ ಸ್ಥಾಪನೆಗೆ ಆಯಿತು
ಒಂದು ನೂರು ವರ್ಷ ॥

ಬೆಡನ್ ಪೊವೆಲ್ ರಚಿಸಿದರು
ಸ್ಕೌಟಿಂಗ್ ಫಾರ್ ಬಾಯ್ಸ್
ಚಂದ್ರಶೇಖರವರು ಕನ್ನಡಕ್ಕೆ
ರೂಪಾಂತರಿಸಿದರು
ಬಾಲಕರಿಗಾಗಿ ಸ್ಕೌಟಿಂಗ್ ॥

ಭಾರತ ಸ್ಕೌಟ್ಸ್ ಮತ್ತು ಗೈಡ್ಸ್
ರಾಜ್ಯ ಸಂಸ್ಥೆಯ ಸಹಯೋಗದಿಂದ
೨೦೦೦ರಲ್ಲಿ ಮುದ್ರಿತವಾಯಿತು
ನವಕರ್ನಾಟಕ ಪಬ್ಲಿಕೇಷನರಿಂದ

ವಿಶ್ವಸಹೋದರತೆ ಸಾರುವ ಈ ಕೃತಿ
ನೆರವಾಗುವದು ಉಪಯುಕ್ತ ಕೈಪಿಡಿ
ವಿಶ್ವಭ್ರಾತೃತ್ವನು ಅರಿಯುವರು
ಅರಣ್ಯ ಕೌಶಲ್ಯವನು ಕಲಿಯುವರು

- ಸ್ಕೌಟ್ ಮಾಸ್ಟರ್ ಶ್ರೀ ಬಿ.ಎಸ್. ಬಾಗೇವಾಡಿ
ಸಮೀರವಾಡಿ

ಸಾರ್ಥಕ ಮನುಷ್ಯನ ಒಂಬತ್ತು ಲಕ್ಷಣಗಳು

ಆಸೆ-ಕೋಪ-ನಾಲಿಗೆ - ಈ ಮೂರನ್ನು ಹತೋಟಿಯಲ್ಲಿಡು.
ವ್ಯಾಪಾರ-ಪ್ರಮಾಣ-ಮದುವೆ - ಈ ಮೂರಕ್ಕೆ ಆತುರಪಡಬೇಡ
ಬುದ್ಧಿಶಕ್ತಿ-ಸಾಮರ್ಥ್ಯ-ಸಂತೋಷ - ಈ ಮೂರಕ್ಕೆ ಬೆಲೆಕೊಡು.
ಹಣ-ಸಮಯ-ಶಕ್ತಿ - ಈ ಮೂರನ್ನು ವ್ಯರ್ಥ ಮಾಡಬೇಡ
ಧರ್ಮ-ನ್ಯಾಯ-ವಿನಯ - ಈ ಮೂರಕ್ಕೆ ಗೌರವ ಕೊಡು
ದೇಶ-ಗೌರವ-ರಾಷ್ಟ್ರಧ್ವಜ - ಈ ಮೂರಕ್ಕೆ ಹೋರಾಡು
ಧೈರ್ಯ-ವಾತ್ಸಲ್ಯ-ಶಿಷ್ಟಾಚಾರ - ಈ ಮೂರನ್ನು ಪ್ರೀತಿಸು
ಅನ್ಯಾಯ-ಅಹಂಕಾರ-ಸ್ವಾಮಿದ್ರೋಹ - ಈ ಮೂರನ್ನು ದ್ವೇಷಿಸು
ಸಾವು-ದುಃಖ-ಸೋಲು - ಈ ಮೂರಕ್ಕೆ ಸಿದ್ಧನಾಗಿರು

- ಅನಾಮಿಕ

ದಾವಣಗೆರೆ

ಜಗಳೂರು ತಾಲ್ಲೂಕು, ಯರಲಕುಂಟೆ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ದಿನಾಂಕ ೩೧-೦೮-೨೦೦೭ ರಂದು ವಿಶ್ವ ಸ್ಕೌಟ್ ಶತಮಾನೋತ್ಸವ ಕಾರ್ಯಕ್ರಮ ಆಚರಿಸಲಾಯಿತು

ವಿಶ್ವ ಸ್ಕೌಟ್ ಶತಮಾನೋತ್ಸವನ್ನು ಶ್ರೀ. ಜೆ.ಜಿ. ಮೃತ್ಯುಂಜಯ, ಬಡ್ತಿ ಮುಖ್ಯ ಶಿಕ್ಷಕರು ನೆರವೇರಿಸಿದರು. ಎಸ್. ಡಿ. ಎಂ. ಸಿ. ಅಧ್ಯಕ್ಷರಾದ ಶ್ರೀ. ಜಿ. ಕರಿಯಪ್ಪ, ಶ್ರೀಮತಿ. ಸಿ. ಮಂಜುಳ, ವಿ. ಎಸ್. ಓ. ಸಿ, ಶ್ರೀ. ನಾಗರಾಜ, ಶ್ರೀ. ಅಂಜಿನಪ್ಪ, ಶ್ರೀಮತಿ. ಜಿ. ಎಂ. ವಜ್ರಗಂಗಮ್ಮ, ಶಾಲೆಯ ಗೈಡ್ ಶಿಕ್ಷಕಿ ಅವರುಗಳನ್ನು ಚಿತ್ರದಲ್ಲಿ ಕಾಣಬಹುದು.

ವಿಶ್ವ ಸ್ಕೌಟ್ಸ್ ಶತಮಾನೋತ್ಸವ ಆಚರಣೆಯಲ್ಲಿ ಭಾಗವಹಿಸಿದ ಸ್ಕೌಟ್ಸ್-ಗೈಡ್ಸ್‌ಗಳು.

ಚಿಕ್ಕಮಗಳೂರು

ಆಗಸ್ಟ 15, 2007 ರಂದು ಚಿಕ್ಕಮಗಳೂರಿನಲ್ಲಿ ಜರುಗಿದ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಜಿಲ್ಲಾ ಆಟದ ಮೈದಾನದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಸ್ವಚ್ಛತೆ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು.

ಹಾಸನ

ಹಾಸನ ತಾಲ್ಲೂಕ ಸ್ಥಳೀಯ ಸಂಸ್ಥೆಯ ವತಿಯಿಂದ ನಡೆದ ಸೈಕಲ್ ಜಾಥಾವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಪುಷ್ಪಲತಾರವರು ಉದ್ಘಾಟಿಸುತ್ತಿರುವುದು. ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಚಿತ್ರದಲ್ಲಿದ್ದಾರೆ.

ರಾಯಚೂರು

ದಿನಾಂಕ 29-08-2007 ರಂದು ರಾಯಚೂರಿನ ನ್ಯಾಷನಲ್ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕಬ್ಸ್ ಮತ್ತು ಬುಲ್ ಬುಲ್ಸ್ ಘಟಕಗಳ ಉದ್ಘಾಟನೆಯನ್ನು ಜಿಲ್ಲಾ ಮುಖ್ಯ ಆಯುಕ್ತ ಶ್ರೀ. ಕೆ. ತಿಮ್ಮಯ್ಯ ನೆರವೇರಿಸಿದರು. ಜಿಲ್ಲಾ ಸ್ಕೌಟ್ ಆಯುಕ್ತ ಡಾ|| ಕೆ. ನರಸಿಂಹಮೂರ್ತಿ, ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ಅಜೀಜಾ ಸುಲ್ತಾನಾ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು

ದಿನಾಂಕ 08-09-2007 ರಂದು ಮೈಸೂರು ಜಿಲ್ಲಾ ಸಂಸ್ಥೆ ಆಚರಿಸಿದ ವಿಶ್ವಸ್ಕೌಟ್ ಶತಮಾನೋತ್ಸವ ಹಾಗೂ ಮಹಾದೇವಿ ಕಬ್ ಪ್ಯಾಕ್ ರಜತ ಮಹೋತ್ಸವ ಸಮಾರಂಭದಲ್ಲಿ ಕಬ್-ಬುಲ್‌ಬುಲ್ ಉತ್ಸವ ಆಚರಿಸಲಾಯಿತು. ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಗೈಡ್ ಆಯುಕ್ತರು, ಜಿಲ್ಲಾ ಕಾರ್ಯದರ್ಶಿ, ಜಿಲ್ಲಾ ಕೋಶಾಧಿಕಾರಿ, ಸ್ಥಾನಿಕ ಆಯುಕ್ತರು, ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಿದರು. ಶತಮಾನೋತ್ಸವ ನೆನಪಿಗಾಗಿ ಚಳವಳಿ ಬೆಳವಣಿಗೆಗೆ ಶ್ರಮಿಸಿದ ಜಿಲ್ಲೆಯ ಸ್ಕೌಟ್ - ಗೈಡ್, ಕಬ್ - ಬುಲ್ ಬುಲ್ ನಾಯಕರುಗಳನ್ನು ಗೌರವಿಸಲಾಯಿತು.

ದಕ್ಷಿಣ ಕನ್ನಡ

ದಿನಾಂಕ 01-08-2007 ರಂದು ಕಾರ್ಮೆಲ್ ಕಾನ್ವೆಂಟ್ ಸಂಯುಕ್ತ ಪದವಿಪೂರ್ವ ವಿದ್ಯಾಲಯ, ಮೊಡಂಕಾಪು, ಬಂಟ್ವಾಳ ತಾಲ್ಲೂಕಿನಲ್ಲಿ ಜರುಗಿದ ಸ್ಕೌಟ್ - ಗೈಡ್ ಶತಮಾನೋತ್ಸವ ಆಚರಣೆ ಸಂದರ್ಭದಲ್ಲಿ ಯೋಗಾಸನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಗೈಡ್ಸ್‌ಗಳು ಶಾಲೆಯ ಮುಖ್ಯಸ್ಥರು ಹಾಗೂ ಗೈಡ್ ಶಿಕ್ಷಕಿಯರು.

MY MORAL AND SPIRITUAL VALUES

1. *I shall respect all religions as so many paths leading to the same Supreme Truth. But for my good, I shall follow my own religion.*
2. *I shall not discriminate between persons because of their colour, creed, caste, religion or nationality.*
3. *I shall honour the teachings and sacred books of all religions-Gita, Upanishads, Tripitaka, Koran, Bible, etc., and try to understand the sharp implications of the knowledge therein.*
4. *I shall respect and honour the great men of all countries.*
5. *I shall mentally pay obeisance to all the sacred places of worship, be they Temples, Churches, Mosques or Synagogues.*
6. *I believe in the efficacy of prayer and shall devote my self at least twice a day for the same.*
7. *I shall pray for my own good, for the good of my kith and kin and for the good of all beings.*
8. *All my work shall be dedicated to the service of the Lord.*
9. *Renunciation of myself and service to the nation and the world as emantions of God shall be the motto of my life.*
10. *May God vouchsafe manliness and strength to me to carry out the above.*

"If a man with an ideal makes a thousand mistakes, I am sure that the man without an ideal makes fifty thousand.

Therefore, it is better to have an ideal. Stand up, be bold, be strong. Take the whole responsibility on your own shoulders, and know that you are the creator of your own destiny. All the strength and succour you want is within yourselves. Therefore make your own future".

- Swami Vivekananda

Compiled by : M.A. Chellaiah

Sri.Alkod Hanumanthappa, Hon'ble Minister for Youth Services & Sports visited the 21st World Scout Jamboree held at Hyland Park, London on 5th August 2007. Sri. B. K. Bahuguna, Jt. Director (S), Sri.Rakesh Sharma, Dy. Director BS&G, New Delhi, Smt. Geetha Nataraj, Smt. Janaki Venugopal, Sri. R. D. Murthy & Sri. T. K. Narayanaswamy are also seen.

His Excellency Sri. T. N. Chaturvedi, Governor of Karnataka, Hosted "HIGH TEA" to the Participants of the 21st World Scout Jamboree held at London at Rajbhavan on 15-8-2007. State Chief Commissioner, Joint State Secretaries and World Jamboree Participants are seen with His Excellency.

Sri. A.S.Srikanth, I.A.S, Secretary to Government, Department of Youth Services & Sports was presented with a Momento by Sri. Kondajji B. Shanmukhappa, State Chief Commissioner, at Dr. Annie Besant Park, Doddaballapur on 26-9-2007.Sri. M.S. Quereshi, Asst. Director, NHQ and Sri. N. Srinivasan, Joint State Secretary (S) are also seen.

Sri. M. Maheshwara Rao. I.A.S, Deputy Commissioner, Mangalore and President of Bharat Scouts and Guides, D. K. District was Presented with a Momento by Dr. K. R. Shetty, Vice-Patron and Sri. I. A. Kairanna, District Chief Commissioner, Bharat Scouts and Guides, D. K. District, Mangalore

Sri. Govinda M. Karjol, Hon'ble Minister for Food & Civil Supplies, Govt. of Karnataka receiving the Salute from the Rangers on 15th August 2007 at the Independence Day Programme held at parade Grounds, Bagalokot.

Guides of Shantiniketana Chitrakala Mahavidyalaya of Chikmagalur received the Rolling Shield on 15 August 2007 on the Occasion of the Independence Day Celebrations.

100 A Hundred years of Promise 2007

Scouting Celebrates Centenary In 2007



INDIA OF MY DREAMS

"I shall work for an India in which the poorest shall feel that it is their country, in whose making they have an effective voice, an India in which there shall be no high class and low class of people; an India in which all communities shall live in perfect harmony. There can be no room in such an India for the curse of untouchability, or the curse of intoxicating drinks and drugs. Women shall enjoy the same rights as men. We shall be at peace with all the rest of the world. This is the India of my dreams."

- Mahatma Gandhi

YOUR SUPPORT WILL HELP US TO REACH OUR GOAL

Regd as News Paper (Magazine) No : **CPMG/KA/BGW-549/2006-08**
Permitted to Post under WPP System
Vide No.: WPP-87 of SSP, BANGALORE WEST
Posted at: Bangalore City H.P.O. on 12-10-2007

ಕರ್ನಾಟಕ ಸ್ಕೌಟ್ ಶತಮಾನೋತ್ಸವ - 2007
ಸ್ಕೌಟ್ ಮತ್ತು ಗೈಡ್ ವಾರ್ತಾ ಪತ್ರಿಕೆ
Karnataka Scout & Guide
News Magazine

If not delivered please return to :

EDITOR, Karnataka Scout & Guide
State Headquarters, Prof. P. Sivashankar Circle
Kondajji Basappa Road, Fort
Bangalore - 560 002.   Ph:26701227

38. SMT. K.K.LEELA
State Training Commissioner (S)
C/o Bharat Scouts and Guides
39, Shanthi Gruha, Palace Road
Bangalore-560001.

published for : The Bharat Scouts & Guides, Karnataka, State Headquarters, Fort, Bangalore - 560 002
by the State Secretary and Printed at : Sathyasri Printers (Pvt) Ltd., 5th Main, Chamarajpet, Bangalore - 560 018.